ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೆ, ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಪ್ರತಿ ವರ್ಷ ಬಿಡುಗಡೆ ಮಾಡಿರುವ ಹಣದ ಪಟ್ಟಿಯನ್ನು ನೋಡಿದರೆ ಕೆಲವು ದೇವಸ್ಥಾನಗಳಿಗೆ ಬಹಳಷ್ಟು ಹೆಚ್ಚು, ಕೆಲವು ದೇವಸ್ಥಾನಗಳಿಗೆ ಬಹಳಷ್ಟು ಕಡಿಮೆ ಹಣ ಬಿಡುಗಡೆ ಮಾಡಿದ್ದಾರೆ. ಈ ವ್ಯತ್ಯಾಸ ಮಾಡಿದ್ದು ಏಕೆ? ಈ ವರ್ಷವಾದರೂ ವ್ಯತ್ಯಾಸ ಇಲ್ಲದೆ ಸರಿಸಮಾನವಾಗಿ ಎಲ್ಲ ದೇವಸ್ಥಾನಗಳಿಗೆ ಎಲ್ಲ ಕ್ಷೇತ್ರಗಳಿಗೆ ಹಣ ಕೊಡಬಹುದೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ವ್ಯತ್ಯಾಸ ಏನು ಮಾಡಿಲ್ಲ. ಒದಗಿಸಲಾದಂತಹ ಹಣದಲ್ಲಿ ನಮ್ಮ ಶಾಸಕರು ಮತ್ತು ಚುನಾವಣಾ ಕ್ಷೇತ್ರದವರು, ತಾಲ್ಲೂಕಿನವರು ಮತ್ತು ಇಲಾಖೆಯ ವತಿಯಿಂದ ಬಂದಂತ ವರದಿಗಳ ಆಧಾರದ ಮೇಲೆ ಅರ್ಧ ಕೆಲಸ ಆಗಿರುವುದಕ್ಕೆ ಪ್ರಾಧಾನ್ಯತೆ ಕೊಟ್ಟಿದೆ. ಬಾಕಿ ಶಾಸಕರ ಮತ್ತು ಶಾಸಕರ ಕ್ಷೇತ್ರದ ಅವಶ್ಯಕತೆಯನ್ನು ಅವಲಂಬಿಸಿ ಎಲ್ಲರಿಗೂ ಕೊಡಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಆ ಪ್ರಕಾರ ಹಂಪೇ ಸಾರಿ ಒಂದೊಂದು ಕ್ಷೇತ್ರಕ್ಕೆ 7 ಲಕ್ಷ, 10 ಲಕ್ಷ ಬಿಡುಗಡೆ ಆಗಿದೆ. ಒಂದೊಂದು ಕ್ಷೇತ್ರಕ್ಕೆ ಕೇವಲ 20 ಸಾವಿರದಂತೆ ಹಣ ಬಿಡುಗಡೆ ಮಾಡಿದ್ದಾರೆ. ಇದರ ಬಗ್ಗೆ ತಾರತಮ್ಯ ಇಲ್ಲದೆ ಎಲ್ಲ ಕ್ಷೇತ್ರಗಳಿಗೂ ಸರಿಸಮಾನವಾಗಿ ಅವರ ಬೇಡಿಕೆ ಪ್ರಕಾರ ಹಣ ಬಿಡುಗಡೆ ಮಾಡಬೇಕು. ಎಲ್ಲ ಶಾಸಕರು ತಮ್ಮ ಬೇಡಿಕೆ ಪಟ್ಟಿಯನ್ನು ಏನು ಕೊಟ್ಟಿದ್ದಾರೆ. ಅದರಂತೆ ಎಲ್ಲರಿಗೂ ನೋಡಿ ಈ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಈಗ ವಿನಾಗಿದೆ ಎಂದರೆ ಅರ್ಧ ಕೆಲಸ ಆಗಿರುವ ಕಡೆ ಸ್ವಲ್ಪ ಹೆಚ್ಚು ಹಣ ಕೊಟ್ಟು ಆ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಮತ್ತೆ ಈ ವರ್ಷ ಒದಗಿಸಲಾಗಿದಂತಹ ಹಣದಲ್ಲಿ ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳಿಗೂ ಸಮಾನವಾಗಿ ಹಂಚಲಾಗಿದೆ. ಆದುದರಿಂದ ತಮ್ಮ ಪ್ರಶ್ನೆಯಲ್ಲಿ ಉಪ ಪ್ರಶ್ನೆ ಉದ್ಭವವಾಗುವುದಿಲ್ಲ. ಎಲ್ಲಿಯಾದರೂ ಅವಶ್ಯಕತೆ ಇರುವ ಕಡೆ ಹಣ ಬಂದಿಲ್ಲವೆಂದು ತಾವು ತೋರಿಸಿದರೆ ಅದನ್ನು ಸರಿ ಮಾಡೋಣ.

ಅಧ್ಯಕ್ಷರು: ಷಫಿ ಅಹಮದ್ ಅವರೆ, ತಮ್ಮ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಷಫಿ ಅಹಮದ್: ಕಳೆದ ಅಧಿವೇಶನದಲ್ಲಿದೆ ಈ ಪ್ರಶ್ನೆ ಕೇಳಿದ್ದೆ. ಈಗಲೂ ಸಚಿವರು ಸಮಯ ಕೇಳಿದ್ದಾರೆ. ಉತ್ತರ ಕೊಟ್ಟಿದ್ದರೆ ಸೂಕ್ತವಾಗಿತ್ತು. ನಮ್ಮ ಕ್ಷೇತ್ರದಲ್ಲಿ ಕೆಲಸ ಆಗಿರುವ ಕಡೆ ಎಲ್.ಒ.ಸಿ. ಬಿಡುಗಡೆ ಆಗಿಲ್ಲ. ಹಣ ಬಿಡುಗಡೆ ಮಾಡಿ ಕೆಲಸ ಮುಂದುವರಿಸಿದರೆ ಸೂಕ್ತವೆಂದು ಮಾನ್ಯ ಸಚಿವರಲ್ಲಿ ವಿನಂತಿ.

ಡಾ॥ ಆರ್. ಬಿ. ಚೌಧರಿ: ನಮಗೆ ಜಿಲ್ಲಾ ಪರಿಷತ್ತಿನಿಂದ ಮಾಹಿತಿ ಬರಲಿಲ್ಲ. ಆದುದರಿಂದ ಸಮಯ ಕೇಳಲಾಗಿದೆ.

ಅಧ್ಯಕ್ಷರು: ಅವರು ಹಣ ಬಿಡುಗಡೆಗೆ ಕೇಳಿದ್ದಾರೆ. ಅವರನ್ನು ಕರೆದು ಮಾತನಾಡಿ ಡಾ॥ಆರ್.ಬಿ. ಚೌಧರಿ. ಹಣ ಬಿಡುಗಡೆಗೆ ಪ್ರಯತ್ನ ನಡೆಯುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಶರಾವತಿನದಿಗೆ ಕಟ್ಟರುವ ಹೊನ್ನಾವರ ಸೇತುವೆ ದುರಸ್ತಿ ಕುರಿತು

598 - ಶ್ರೀ ಬಸವರಾಜು (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ನದಿಗೆ ಹೊನ್ನಾವರ ಸೇತುವೆ ದುರಸ್ತಿ ನಿಮಿತ್ತ ಭಾರಿ ವಾಹನಗಳು ಈ ಮಾರ್ಗವನ್ನು ಕ್ರಮಿಸಿ ಸಂಚರಿಸುವ ಬದಲು ಬ್ರಹ್ಮಾವರ -ಬಾರಕೂರು- ಬಡ್ಕಲ್ ಕಟ್ಟೆ ಬಾಳೆಬರೆ -ಘಾಟಿ ಮಾರ್ಗದಲ್ಲಿ ಸಂಚರಿಸುವುದು ನಿಜವೇ?

ಆ) ಭಾರಿ ವಾಹನಗಳ ದಟ್ಟಣೆಯಿಂದ ಬಾರಕೂರು ನಂತರದ ರಸ್ತೆಯು ಹಾಳಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುವುದು ನಿಜವೇ?

ಇ) ಲೋಕೋಪಯೋಗಿ ಇಲಾಖೆ ಈ ಸಾಲಿನಲ್ಲಿ ಸದರಿ ರಸ್ತೆಯ ದುರಸ್ತಿ ಕಾರ್ಯ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕೆಲವು ಭಾರಿ ವಾಹನಗಳು ಶರಾವತಿ ನದಿಯಲ್ಲಿ ಸೇತುವೆ ಹತ್ತಿರ ನಡೆಸುತ್ತಿರುವ ಬಾರ್ಜ್ ಮೂಲಕವೂ ಕೆಲವು ವಾಹನಗಳು ಸದರಿ ರಸ್ತೆಯ ಮೂಲಕವೂ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ಸದರಿ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳನ್ನು ಒಟ್ಟು 11.46 ರೂ.ಗಳ ವೆಚ್ಚದಲ್ಲಿ ದುರಸ್ತಿಪಡಿಸಲಾಗುತ್ತಿದೆ. ಅನುದಾನ ಲಭ್ಯತೆಯನ್ನು ಅನುಸರಿಸಿ ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಹಂತಹಂತವಾಗಿ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಪಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಬಾರಕೂರು ಬಡ್ಕಲ್ಕಟ್ಟೆ ಬಾಳೆಬರೆ ರಸ್ತೆಗಳು ಹಾಳಾದುದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಎರಡು ವರ್ಷಗಳ ಹಿಂದೆ ಶರಾವತಿ ಸೇತುವೆ ಹಾಳಾಗಿ ಭಾರಿ ವಾಹನಗಳು ಈ ರಸ್ತೆಯಲ್ಲಿ ತಿರುಗಾಡಿದ್ದರಿಂದ ರಸ್ತೆ ಹಾಳಾಗಿದೆ. ಈ ವರ್ಷ ಮುಗಿದರೂ ರಿಪೇರಿ ಮಾಡಿಲ್ಲ. ಯಾವಾಗ ರಿಪೇರಿ ಮಾಡುತ್ತೀರೆಂದು ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ರಿಪೇರಿ ಮಾಡಿಲ್ಲವೆಂದು ಅಲ್ಲ. ರಸ್ತೆ ಕೆಟ್ಟು ಹೋಗಿದೆ. ಆ ಭಾಗದಲ್ಲಿ ಹೆಚ್ಚು ವಾಹನಗಳು ಓಡಾಡುತ್ತಿರತಕ್ಕದ್ದು ನಿಜ. ಕೆಲವು ಆಯ್ದ ಭಾಗಗಳಲ್ಲಿ ಕೆಟ್ಟಿರುವುದನ್ನು ಸರಿಪಡಿಸುವುದಕ್ಕೋಸ್ಕರ 11 ಲಕ್ಷದ 40 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಪಿ. ಬಸವರಾಜ್ : ಮಾನ್ಯ ಸಚಿವರು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ ರಸ್ತೆ ರಿಪೇರಿ ಮಾಡಿಕೊಡುತ್ತೇವೆಂದು ಆಶ್ವಾಸನೆ ನೀಡಿದ್ದರು. ತಮ್ಮ ಇಂಜಿನಿಯರಿಂಗ್ ಇಭಾಗಕ್ಕೆ 20 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಬಂದಿದೆ. ಆದಷ್ಟು ಬೇಗ ಆದನ್ನು ಮಂಜೂರು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಆ ರಸ್ತೆ ತುಂಬಾ ಉದ್ದವಾಗಿದೆ. 52 ಕಿಲೋಮೀಟರ್ ಉದ್ದ ಇದೆ.

ಶ್ರೀ ಎ. ಬಸವರಾಜ್ : ಅದರಲ್ಲಿ 9 ಕಿಲೋಮೀಟರ್ ಕುಂದಾಪುರ ಭಾಗಕ್ಕೆ ಬರುತ್ತದೆ. 18 ಕಿಲೋಮೀಟರ್ ರಸ್ತೆಗೆ 20 ಲಕ್ಷ ರೂಪಾಯಿ ಎಸ್ಟಿಮೇಟ್ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಹಣದ ಪರಿಸ್ಥಿತಿ - ನೋಡಿಕೊಂಡು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಬಸವರಾಜ್ : ಮಾರ್ಚ್ ಅಂತ್ಯದೊಳಗೆ ರಿಪೇರಿ ಮಾಡಿಸಿಕೊಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಆ ಪ್ರಕಾರ ಹೇಳಿದರೆ ಸುಳ್ಳು ಭರವಸೆ ಆಗುತ್ತದೆ. ಇವತ್ತು ತಾರೀಖು 28. ಇನ್ನು 3 ದಿನಗಳಲ್ಲಿ ಮಾರ್ಚ್ ಮುಗಿಯುತ್ತದೆ. ಆದ್ದರಿಂದ ಅದು ಹೇಗೆ ಆಗುತ್ತದೆ? ಮಾಡಿಸಿಕೊಡೋಣ.

ವಿದ್ಯುಚ್ಛಕ್ತಿ ಉಪಕರಣಗಳು ದೊರೆಯುವುದಿಲ್ಲದರ ಬಗ್ಗೆ

656 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೆಂದು ನಾಗರೀಕ ಸೌಲಭ್ಯಗಳನ್ನು ಕಲ್ಪಿಸಲು ಸಮರ್ಪಕವಾದ ಉಪಕರಣಗಳನ್ನು ಕಲ್ಪಿಸದಿರುವುದು ಸರ್ಕಾರದ ಗಮನದಲ್ಲಿ ಇದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಾರ್ವಜನಿಕರ ಅನುಕೂಲಕ್ಕಾಗಿ ಮುಖ್ಯವಾಗಿ ಕುಡಿಯುವ ನೀರಿನ ಸ್ಥಾವರಗಳು, ಬೀದಿ ದೀಪಗಳು ಇತ್ಯಾದಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಶ್ರಮ ವಹಿಸುತ್ತಿದೆ. ಇದಕ್ಕಾಗಿ ಅಗತ್ಯವಿರುವ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್, ವಿದ್ಯುತ್ ತಂತಿ ಇತ್ಯಾದಿ ಸಾಮಗ್ರಿಗಳನ್ನು ಖರೀದಿಸಿ ಬಳಸಲಾಗುತ್ತಿದೆ. ಅಲ್ಲದೇ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡಲು ಮತ್ತು ಒಳ್ಳೆಯ ವೋಲ್ಟೇಜಿನಲ್ಲಿ ವಿದ್ಯುತ್ ಸರಬರಾಜು ಮಾಡಲು ಮಂಡಳಿಯು ಹೊಸ ವಿದ್ಯುತ್ ಸ್ವೀಕರಣ ಕೇಂದ್ರಗಳನ್ನು ಹೊಸ ಉಪಕೇಂದ್ರಗಳನ್ನು ಪ್ರತಿ ವರ್ಷ ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ, ಮಂಡಳಿಯು ವಿಷಿಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್, ಗ್ರಾಮೀಣ ವಿದ್ಯುದ್ದೀಕರಣ ನಿಗಮ ಮುಂತಾದ ಸಂಸ್ಥೆಗಳಿಂದ ಸಾಲವನ್ನು ಪಡೆಯುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ವಿದ್ಯುತ್ತನ್ನು ಒದಗಿಸತಕ್ಕಂಥ ವಿಚಾರದಲ್ಲಿ ರೈತರಿಗೆ, ಕೈಗಾರಿಕೋದ್ಯಮಿಗಳಿಗೆ, ಕುಡಿಯುವ ನೀರಿನ ಬಗ್ಗೆ ಹೀಗೆ ಅನೇಕ ಸಮಸ್ಯೆಗಳು ಬರುತ್ತಿರುವುದನ್ನು ಪ್ರತಿನಿತ್ಯವೂ ನಾವು ಕಾಣುತ್ತಿದ್ದೇನೆ. ರೈತರು ಪಂಪ್ಸೆಟ್ಟುಗಳನ್ನು ಹಾಕಿದ್ದರೂ ವಿದ್ಯುತ್ಸಂಪರ್ಕ ಕೊಡದೆ ವರ್ಷಗಟ್ಟಲೆ ನಿಧಾನ ಆಗಿರುತ್ತದೆ. ಸಾಮಗ್ರಿಗಳ ತೊಂದರೆಯ ವಿಚಾರದಲ್ಲಿ ಪಂಪ್ಸೆಟ್ಟುಗಳಿಗೂ ಕೂಡ ವಿದ್ಯುತ್ತಿನ ಸಂಪರ್ಕವಾಗುತ್ತಿಲ್ಲ. ಅದೇ ರೀತಿ ಸಣ್ಣ ಕೈಗಾರಿಕೆಗಳು ಇಡೀ ರಾಜ್ಯದಲ್ಲಿ ಕೆ.ಎಫ್.ಸಿ. ಯಿಂದ, ಬ್ಯಾಂಕ್ಗಳಾಂತರ ಲೋನ್ಗಳನ್ನು ತೆಗೆದುಕೊಂಡು ಸಂಪೂರ್ಣವಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಮೆಷಿನರಿ ಬಂದಾಗಿರುತ್ತದೆ. ಬಿಲ್ಡಿಂಗ್ ಕಟ್ಟಾಗಿದೆ, ಲ್ಯಾಂಡ್ ಎಲ್ಲ ಖರೀದಿ ಮಾಡಿಯಾಗಿದೆ. ಇಷ್ಟೆಲ್ಲ ಆಗಿದ್ದರೂ ಕೂಡ ವಿದ್ಯುಚ್ಛಕ್ತಿ ಇಲ್ಲವೆಂಬ ಒಂದೇ ಒಂದು ಕಾರಣದಿಂದ ಇಡೀ ರಾಜ್ಯದಲ್ಲಿ ಸ್ಥಾಪಿಸಿರುವ ಅನೇಕ ಇಂಡಸ್ಟ್ರಿಗಳು ಪ್ರಾರಂಭವಾಗಿಲ್ಲ. ಇದಕ್ಕೆ ತುಂಬ ಪ್ರಮುಖವಾದ ಕಾರಣ ವಿದ್ಯುಚ್ಛಕ್ತಿಯ ಸಣ್ಣಪುಟ್ಟ ಉಪಕರಣಗಳು ಇಲ್ಲವೆಂಬ ಉತ್ತರ ಬರುತ್ತಿದೆ. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಎಲ್ಲ ರೀತಿಯಲ್ಲೂ ಆಗಿರುತ್ತದೆ. ಆದರೆ ವಿದ್ಯುತ್ತಿನ ಸಂಪರ್ಕವಿಲ್ಲದೆ ನೀರಿನ ತೊಂದರೆ ಕೂಡ ಇಡೀ ರಾಜ್ಯದಲ್ಲಿ ಉಂಟಾಗಿರುತ್ತದೆ. ಇದಲ್ಲದೆ ವಿಶೇಷ ಘಟಕ ಯೋಜನೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿದೆ. ಅಲ್ಲೂ ಕೂಡ ಒಂದು ಲಕ್ಷರೂಪಾಯಿಗಳಿಗಿಂತ ಜಾಸ್ತಿಯಾದರೆ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದಾಗಿ ವಿದ್ಯುತ್ ಸಂಪರ್ಕವಿಲ್ಲದೆ ಯೋಜನೆಗಳು ಕೂಡ ಪ್ರಾರಂಭವಾಗುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಈ ವಿದ್ಯುತ್ ಇಲಾಖೆಯ ಕಾರ್ಯವೈಖರಿಗಳ ಬಗ್ಗೆ ಇಡೀ ಜನರು ಅಲ್ಲಿ ಛೀಮಾರಿ ಹಾಕಿದ್ದು ಸನ್ಮಾನ್ಯ ಮುಖ್ಯಮಂತ್ರಿಗಳವರಿಗೆ ಗೊತ್ತಿರುತ್ತದೆ. ಅದಕ್ಕೋಸ್ಕರ ಇಡೀ